ಶ್ರೀ ವಾಟಾಳ್ ನಾಗರಾಜ್:- ತಾವು ಕಡತ ತೆಗೆದು ನೋಡಬೇಕು. ಮಾರಿ ಕಣ್ಣು ಹೋತನಮೇಲೆ ಎಂದು ಒಂದು ಗಾದೆ ಇದೆ. ಅರೀತಿ ಆಗಬಾರದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ನಿಮಗೆ ಬೇಕಾದಾಗ ನಿಯಮ ಬೇಕು, ಬೇಡವಾದಾಗ ನಿಯಮ ಬೇಡ ಎನ್ನತಕ್ಕ ಪದ್ಧತಿ ಬೇಡ.

ಶ್ರೀ ವಾಟಾಳ್ ನಾಗರಾಜ್:- ನಾವು ಯಾವತ್ತೂ ನಿಯಮಗಳನ್ನು ಗಾಳಿಗೆ ತೂರಬೇಕೆಂದು ಇಲ್ಲ. ಅನೇಕ ಪ್ರಸಂಗಗಳಲ್ಲಿ ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಿತಕ್ಕಂಥದ್ದು ಸಂಪ್ರದಾಯವಿದೆ. ನಾವು ಅನೇಕ ಸಾರಿ ತಮ್ಮ ಕೊಠಡಿಗೆ ಬಂದಿದ್ದೇವೆ, ತಮ್ಮನ್ನು ಕೇಳಿದ್ದೇವೆ. ಇಂಥಾದ್ದನ್ನು ನಾನು ಪ್ರಸ್ತಾಪ ಮಾಡುತ್ತೇವೆಂದು ಕೇಳಿದ್ದೇವೆ. ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಆ ರೀತಿ ತಾವು ಅನುಮತಿ ಕೊಟ್ಟಮೇಲೆ ಇಲ್ಲಿ ನಾನು ವಿಧಿ ವಿಧಾನಗಳನ್ನು ಗಾಳಿಗೆ ತೂರುವ ಪ್ರಶ್ನೆಯೇ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅನುಮತಿಯನ್ನು ಕೊಟ್ಟಮೇಲೆ ನಾವು ಏನನ್ನೂ ಹೇಳುವುದಿಲ್ಲ. ಅನುಮತಿಯನ್ನು ಕೊಟ್ಟಮೇಲೆ ನಾವು ಅದಕ್ಕೆ ಬದ್ದರಾಗುತ್ತೇವೆ. ಅನುಮತಿಗನುಸಾರವಾಗಿ ನಾವೂ, ನೀವೂ ನಡೆದುಕೊಳ್ಳಬೇಕಾಗುತ್ತದೆ. ಆದರೆ ನಿಯಮವನ್ನು ತಿಳಿದುಕೊಂಡು ನಾವೂ ನೀವೂ ನಡೆದುಕೊಳ್ಳೋಣವೆಂದು ನಮ್ರವಾಗಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಿಯಮವನ್ನು ಯಾವಾಗ ಬೇಕಾದರೂ ಸಡಿಲ ಮಾಡುವುದು, ಯಾವಾಗ ಬೇಕಾದರೂ ಡಿಫ್ಯೂಸ ಮಾಡತಕ್ಕದ್ದು ಬೇಡ. ಅಧ್ಯಕ್ಷರು ಅನುಮತಿಯನ್ನು ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ ಕೆಲವು ಸಂದರ್ಭದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಎಂದು ತಾವು ಹೇಳುತ್ತೀರಿ. ಆದ್ದರಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಏತಕ್ಕೆ ಹೇಳುತ್ತೀರಿ. ನಾನು ೧೯೬೭ನೇ ಇಸವಿಯಿಂದಲೂ ಈ ಸದನದಲ್ಲಿದ್ದೇನೆ.

ಛೇರ್ಮನ್:- ಈಗ ವಿಷಯಗಳನ್ನೆಲ್ಲಾ ಪ್ರತಿಪಾದನೆ ಮಾಡಿದ್ದಾಯಿತು. ಮಾನ್ಯ ಉಪ ಮುಖ್ಯ ಮಂತ್ರಿಗಳೂ ಹೇಳಿದರು. ಮಾನ್ಯ ಕಾನೂನು ಮಂತ್ರಿಗಳೂ ಹೇಳಿದ್ದಾರೆ. ವಿಷಯವೆಲ್ಲಾ ಗೊತ್ತಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗಾಗಲೇ ತಾವೇ ಅನುಮತಿಯನ್ನು ಕೊಟ್ಟು ಅದು ಅಜೆಂಡಾದಲ್ಲಿ ಬಂದಿರತಕ್ಕ ವಿಷಯವಾದ್ದರಿಂದ ಇದಕ್ಕೆ ದಯಮಾಡಿ ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಈಗ ಈ ಆದೇಶವನ್ನು ತಡೆಹಿಡಿದು ರೂಲಿಂಗ್‌ನ್ನು ಕಾದಿರಿಸಲಾಗಿದೆ.

Sri B.S.YEDUYURAPPA:- Thankyou Sir,

ಛೇರ್ಮನ್:- ಈಗ ಗಮನ ಸೆಳೆಯುವ ಸೂಚನೆಗಳು.

<u>ಗಮನ ಸೆಳೆಯುವ ಸೂಚನೆಗಳು</u>

೧) ವಿಷಯ:- ಅರೆಕಾಲಿಕ ಪ್ರೌಢಶಾಲೆ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ.

೧೧.೩೦ ಎ.ಎಂ

* ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಾಳೆ ದಿವಸ ಮಹಾ ಶಿವರಾತ್ರಿ. ಆದರೆ ಈ ಅರೆಕಾಲಿಕೆ ಶಿಕ್ಷಕರಿಗೆ ವರ್ಷವಿಡೀ ಮಹಾಶಿವರಾತ್ರಿಯಾಗುತ್ತಿದೆ. ವರ್ಷವಿಡೀ

ಉಪವಾಸ ಇರತಕ್ಕಂಥ ಸ್ಥಿತಿ ಅವರಿಗೆ ಬಂದಿದೆ. ಇವರ ಕಡೆ ಸರ್ಕಾರ ಏತಕ್ಕೆ ಗಮನಕೊಡುತ್ತಿಲ್ಲವೋ ನನಗಂತೂ ಅರ್ಥವಾಗುತ್ತಿಲ್ಲ. ಅನೇಕ ವರ್ಷಗಳಿಂದ ಈ ಅರೆಕಾಲಿಕ ಶಿಕ್ಷಕರು ಸರ್ಕಾರಿ ಪ್ರೌಢಶಾಲೆಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಅವರು ಮಾಡುತ್ತಿರುವ ಉದ್ಯೋಗ ಪೂರ್ಣ ಕಾಲಿಕೆ ಉದ್ಯೋಗ. ಅವರಿಗೆ ಸಿಕ್ಕುತ್ತಿರತಕ್ಕಂಥ ವೇತನ ೧೦೦ ರೂಪಾಯಿನಿಂದ ಪ್ರಾರಂಭವಾಯಿತು. ಕೊನೆಗೆ ೧೯೮೯ನೇ ಇಸವಿಯಲ್ಲಿ ೩೦೦ ರೂಪಾಯಿಗಳವರೆಗೆ ವೇತನ ಕೊಡಲಿಕ್ಕೆ ಶುರು ಮಾಡಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ೩೦೦-೪೦೦-೫೦೦ ರೂಪಾಯಿಗಳಿಂದ ಯಾವುದಾದರೂ ಒಂದು ಸಂಸಾರ ನಡೆಯಲಿಕ್ಕೆ ಸಾಧ್ಯವೇ ಎಂದು? ಒಬ್ಬ ಭಿಕ್ಷುಕ ಇವತ್ತು ಸಾವಿರಾರು ರೂಪಾಯಿ ದುಡಿಯುತ್ತಾನೆ. ಶಿಕ್ಷಕರನ್ನು ಈ ದೇಶದಲ್ಲಿ ಗುರುಗಳು ಎಂದು ನಾವು ಕರೆಯುತ್ತೇವೆ. ಯಾವುದೇ ಒಂದು ಸಮಾಜ ಮುಂದುವರಿಯಬೇಕಾದರೆ ಸರಿಯಾದ ಗುರು ಇರಬೇಕು, ಮುಂದಿನ ಗುರಿ ಇರಬೇಕು ಎಂದು ನಾಡುನುಡಿ ಇದೆ. ಆದರೆ ಗುರುಗಳಿಗೆ ಸರಿಯಾದ ಜೀವನ ಮಾಡತಕ್ಕಂಥ ಸ್ಥಿತಿಯನ್ನು ಈ ಸಮಾಜ, ಈ ಸರ್ಕಾರ ನಿರ್ಮಾಣ ಮಾಡಿಕೊಡದಿದ್ದರೆ ಅವರು ಹೇಗೆ ಬದುಕಬೇಕು ಎಂದು ದಯವಿಟ್ಟು ಯೋಚನೆ ಮಾಡಿ. ಅವರು ೧೦-೧೫ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅಷ್ಟು ವರ್ಷಗಳಿಂದ ಅವರು ಕೆಲಸ ಮಾಡುತ್ತಿದ್ದರೂ ಅವರಿಗೆ ಇನ್ನು ಕೂಡ ಪೂರ್ಣ ಉದ್ಯೋಗ ಸಿಕ್ಕಿಲ್ಲ. ಕನ್‌ಫರ್ಮ್ ಮಾಡಿಲ್ಲ, ಮಾನ್ಯ ಉಪಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಯೋಚನೆ ಮಾಡಬೇಕು. ಅವರು ಇವತ್ತಲ್ಲ ಹೇಳುತ್ತಾ ಬಂದಿರುವುದು, ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ.

ಛೇರ್ಮನ್:- ಮಾನ್ಯ ಸದಸ್ಯರು ಸೂಚನೆಯನ್ನು ಮಾಡಿದರೆ ಸಾಕು. ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅರೆಕಾಲಿಕ ಪ್ರೌಢಶಾಲೆ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪವಿದೆ. ಈ ಸಭೆ ತನ್ನದೇ ಆದಂಥ ನಿಯಮಾವಳಿಗಳನ್ನು ಅನುಸರಿಸಿ ಕೆಲಸ ಮಾಡಬೇಕಾದಂಥದ್ದು ಇದೆ. ಗಮನ ಸೆಳೆಯುವ ಸೂಚನೆಯಲ್ಲಿ ಸದಸ್ಯರು ಸರ್ಕಾರದ ಗಮನವನ್ನು ಸೆಳೆದು ನಂತರ ಸಚಿವರು ಹೇಳಿಕೆಯನ್ನು ಕೊಟ್ಟಮೇಲೆ ಕ್ಲಾರಿಫಿಕೇಶನ್ ಕೇಳತಕ್ಕಂಥದ್ದು ನಮ್ಮ ನಿಯಮದಲ್ಲಿರತಕ್ಕಂಥಾದ್ದು.

(ಗೊಂದಲ)

ಛೇರ್ಮನ್:- ನಾನು ಅದೇ ಸೂಚನೆಯನ್ನು ಮಾಡಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ನಾನು ಅದನ್ನೇ ಕೇಳುತ್ತಾ ಇದ್ದೇನೆ. ಕಾನೂನು ಯಾವಾಗ ಬದಲಾವಣೆಯಾಯಿತು. ಅಥವಾ ಏನಾದರು ಆಗಿದ್ದರೆ ನಮಗೆ ಸ್ವಲ್ಪ ತಿಳಿಸಬೇಕೆಂದು ಕೇಳುತ್ತಿದ್ದೇನೆ.

ಛೇರ್ಮನ್:- ಸೂಚನೆಯನ್ನು ಇಲ್ಲಿ ಹೇಳಿ.

*ಡಾ. ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ. ಅರೆಕಾಲಿಕ ಶಿಕ್ಷಕರನ್ನು ಸೇವೆಯಲ್ಲಿ ಖಾಯಂಗೊಳಿಸಲು ನೇಮಕಾತಿ ನಿಯಮಗಳಲ್ಲಿ ಯಾವುದೇ ಅವಕಾಶವಿರುವುದಿಲ್ಲ.

ಇತರ ಅಭ್ಯರ್ಥಿಗಳಂತೆ ಇವರೂ ಸಹಾ ನೇಮಕಾತಿ ನಿಯಮದಂತೆ ಆಯ್ಕೆಯಾಗಬೇಕಾಗುತ್ತದೆ. ಅರೆಕಾಲಿಕ ಶಿಕ್ಷಕರು, ಶ್ರೇಷ್ಠ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಇವರಿಗೆ ನೇಮಕಾತಿಯಲ್ಲಿ ಸೂಕ್ತ ಕೃಪಾಂಕ ನೀಡಿ ನೇಮಕಾತಿಗೆ ಪರಿಗಣಿಸಲು ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ ೪೨೧ ಎಸ್‌ಎಲ್‌ಬಿ ೯೧ ದಿನಾಂಕ: ೨೮-೩-೧೯೯೨ ರಲ್ಲಿ ಅರೆಕಾಲಿಕ ಶಿಕ್ಷಕರುಗಳಿಗೆ ಒಂದು ವರ್ಷದ ಸೇವೆಗೆ ೦.೫೦ ಕೃಪಾಂಕ ನೀಡಿದೆ ಹಾಗೂ ಇವರಿಗೆ ಪೂರ್ಣ ವಯೋಮಿತಿ ರಿಯಾಯಿತಿ ನೀಡಿದೆ. ಇದರಂತೆ ೧೯೯೨ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಈ ಆಂಶವನ್ನು ಜಾರಿಗೊಳಿಸಿ ನೇಮಕಾತಿ ಮಾಡಲಾಗಿದೆ. ಇದನ್ನು ಹೊರತು ಪಡಿಸಿ ಇನ್ಯಾವುದೇ ರೀತಿಯಿಂದಲೂ ಇವರುಗಳನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

*ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಈ ಉತ್ತರವನ್ನು ನೋಡಿದರೆ ನಾಳೆ ೨೨-೨-೯೩ ರಿಂದ ಅಮರಣಾಂತ ಉಪವಾಸ ಮಾಡಬೇಕೆಂದು, ಏನು ಅರೆಕಾಲಿಕ ಶಿಕ್ಷಕರು ತೀರ್ಮಾನ ಮಾಡಿದ್ದಾರೆ, ನಿಜಕ್ಕೂ ಅವರು ಯಾರನ್ನೂ ಕೂಡ ಉಳಿಸಲಿಕ್ಕೆ ಸರ್ಕಾರ ತೀರ್ಮಾನ ಮಾಡಿಲ್ಲ ಎನ್ನುವಂಥ ಉತ್ತರ ಸರ್ಕಾರದ ಉತ್ತರದಲ್ಲಿ ಸಿಕ್ಕುತ್ತಾ ಇದೆ. ಈ ಉತ್ತರ ಈವತ್ತು ಕೂಡುತ್ತಾ ಇದ್ದೀರಿ. ಅನೇಕ ವರ್ಷಗಳಿಂದ ಅವರು ಮನವಿ ಕೊಟ್ಟಂಥ ಸಂದರ್ಭದಲ್ಲಿ ಈ ಉತ್ತರ ಕೊಟ್ಟಿಲ್ಲ. ಪರಿಶೀಲನೆ ಮಾಡುತ್ತೇನೆ, ಗಮನಿಸುತ್ತೇನೆ, ನಿಮಗೆ ಖಂಡಿತ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಈ ರೀತಿ ಹೇಳುತ್ತಾ ಬಂದಿದ್ದೀರಿ. ಹೇಳುತ್ತಾ ಬಂದು ಕೋರ್ಟ್‌ನ ತೀರ್ಮಾನದ ಪ್ರಕಾರ ಕೋರ್ಟ್ ತೀರ್ಮಾನವಾಗಿರುವಕಡೆ ೧೦೪೦ ರಿಂದ ೧೪೦೦ ರೂಪಾಯಿಗಳನ್ನು ಈಗಾಗಲೇ ಅನೇಕರು ಪಡೆಯುತ್ತಿದ್ದಾರೆ. ನಾನು ಏತಕ್ಕೆ ಈ ಅಂಶ ಅನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆಂದರೆ, ತಾವು ಸರ್ಕಾರದವರು ಈ ದಿಕ್ಕಿನಲ್ಲಿ ಗಮನಿಸಿದರೆ, ಈ ಗುರುಗಳಿಗೆ ಖಂಡಿತ. ದ್ರೋಹವಾಗಲಿಕ್ಕಿಲ್ಲ. ಏತಕ್ಕೆಂದರೆ ಈ ಗುರುಗಳಿಗೆ ಸರಿಯಾದ ಸ್ಥಾನ ಸಿಕ್ಕಿದರೆ ಸಮಾಜಕ್ಕೆ ಸರಿಯಾದ ಸ್ಥಾನ ಸಿಕ್ಕುತ್ತದೆ. ಚಾಣಕ್ಯ-ಚಂದ್ರಗುಪ್ತನ ಕಥೆ ಕೇಳಿದ್ದೀರಿ. ಚಾಣಕ್ಯನ ಸರಿಯಾದ ಮಾರ್ಗದರ್ಶನದಿಂದ ಚಂದ್ರಗುಪ್ತ ಇಡೀ ದೇಶದಲ್ಲಿ ಒಳ್ಳೆಯ ಆಡಳಿತ ಕೊಟ್ಟ. ಅದೇ ರೀತಿ ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಸಮರ್ಥ ರಾಮದಾಸರ ಕಥೆ ಕೇಳಿದ್ದೀರಿ. ಸಮರ್ಥ ರಾಮದಾಸರು ನೀಡಿದ ಮಾರ್ಗದರ್ಶನದಿಂದ ಛತ್ರಪತಿ ಶಿವಾಜಿಯವರು ಇಡೀ ಸಮಾಜವನ್ನು ಒಂದುಗೂಡಿಸುವುದರಲ್ಲಿ ಯಶಸ್ವಿಯಾದರು. ಈ ಗುರುಗಳನ್ನು ತಾತ್ಸಾರ ಮಾಡಿದರೆ ಖಂಡಿತ ಇದು ಗಾರಿ ಇಲ್ಲದ ಸರ್ಕಾರವಾಗುತ್ತದೆ. ಇಡೀ ರಾಜ್ಯದಲ್ಲಿ ಗುರುಗಳೇ ಅರೆ ಹೊಟ್ಟೆಯಲ್ಲಿ ಜೀವನ ಮಾಡುವ ಸ್ಥಿತಿ ಬಂದರೆ ಇನ್ನುಯಾರಿಗೆ ಅನುಕೂಲವಾಗುತ್ತದೆ, ದಯವಿಟ್ಟು ಯೋಚಿಸಿ. ಆ ವಿದ್ಯಾರ್ಥಿಗಳ ಗತಿ ಏನು? ಸರಿಯಾಗಿ ಊಟ ತಿಂಡಿ ಇಲ್ಲವೆಂದರೆ ಎಂತಹ ಪಾಠ ಮಾಡುತ್ತಾರೆ? ಅವರು ಬೇರೆ ಬೇರೆ ದಿಕ್ಕಿನಲ್ಲಿ ಹೋಗಬೇಕಾಗುತ್ತದೆ. ಖಾಸಗಿಯಾಗಿ ಪಾಠ ಪ್ರವಚನ ಹೇಳಬೇಕಾಗುತ್ತದೆ. ಸಿಕ್ಕಿರುವ ನೌಕರಿ ಬಳಸಿಕೊಂಡು ಟ್ಯೂಷನ್ ಮತ್ತಿತರ ದಿಕ್ಕಿನಲ್ಲಿ ಗಮನ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಸರ್ಕಾರ ಈ ದಿಕ್ಕಿನಲ್ಲಿ ಯೋಚಿಸಬೇಕು. ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿ ಒಪ್ಪಿಕೊಂಡಿದ್ದೀರಿ. ಅವರಿಗೆ ಅವಕಾಶ ಮಾಡಿಕೊಟ್ಟು ಬೇರೆ ರೂಪದಲ್ಲಿ ನೀವೇ ಅವರನ್ನು ತೆಗೆದುಕೊಂಡಿದ್ದೀರಿ. ಗುತ್ತಿಗೆ ಶಿಕ್ಷಕರು, ಲೋಕಲ್ ಕ್ಯಾಂಡಿಡೇಟ್ಸ್ ದಿನಗೂಲಿ ನೌಕರರು . ಈ ರೀತಿಯಾಗಿ ತಾವೇ ಸೃಷ್ಟಿ ಮಾಡಿಕೊಂಡಿದ್ದೀರಿ. ಈ ರೀತಿ ಅವಕಾಶ ಮಾಡಿಕೊಟ್ಟ ಮೇಲೆ ಒಮ್ಮೆಗೆ ಯಾವುದೇ ದೃಷ್ಟಿಯಲ್ಲಿ ಖಾಯಂಗೊಳಿಸುವುದಕ್ಕೆ ಅವಕಾಶ ಇರುವುದಿಲ್ಲವೆಂದರೆ ಸರ್ಕಾರ ಈ ರೀತಿ ಪ್ರಾವಿಜನ್ ಮಾಡಬಹುದೆ? ಬೇರೆಯವರಿಗೆ ಖಾಯಂ ಮಾಡಿಕೊಡುವುದಕ್ಕೆ ಅವಕಾಶ ಇದೆ, ಆದರೆ ಇವರಿಗೆ ಏತಕ್ಕೆ ಮಾಡುವುದಿಲ್ಲ? ೧೦-೧೫ ವರ್ಷಗಳಿಂದ ನಿಮ್ಮನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದೇವೆ ನಮ್ಮನ್ನು ಬಿಡಾಗಡೆ ಮಾಡಬೇಡಿ, ಇದೇ ಹುದ್ದೆಯಲ್ಲಿ

ಮುಂದುವರಿಯುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ. ಬಹುಶಃ ಮಂತ್ರಿಗಳಿಗೆ ಗೊತ್ತಿಲ್ಲವೆಂದು ಕಾಣುತ್ತದೆ, ಅನೇಕ ಶಿಕ್ಷಕರಿಗೆ ಇನ್ನು ಮದುವೆಯಾಗಿಲ್ಲ, ೩೫-೪೦ ವರ್ಷ ವಯಸ್ಸಾಗಿದೆ. ಮದುವೆಯಾಗುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಅವರ ಸಂಬಳದಲ್ಲಿ ಹೆಂಡತಿಗೆ ಏತಕ್ಕೆ ಕಷ್ಟ ಮಾಡಬೇಕೆಂದು ಯೋಚಿಸುತ್ತಿದ್ದಾರೆ. ಆದ್ದರಿಂದ ಮದುವೆಯಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಫ್ಯಾಮಿಲಿ ಪ್ಲಾನಿಂಗ್ ಆಗುತ್ತದೆ, ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಫ್ಯಾಮಿಲಿ ಪ್ಲಾನಿಂಗ್ ಆಗುತ್ತದೆಂದು ನೀವು ಯೋಚಿಸಿದರೆ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಈ ಶಿಕ್ಷಕರನ್ನು ದಂಡಿಸಿ ಫ್ಯಾಮಿಲಿ ಪ್ಲಾನಿಂಗ್ ಮಾಡಬೇಡಿ. ವರ್ಷಕ್ಕೊಬ್ಬರು ಮುಖ್ಯ ಮಂತ್ರಿಗಳಾಗುತ್ತಿದ್ದಾರೆ. ಆ ಕಡೆ ಮುಂಚೆ ಫ್ಯಾಮಿಲಿ ಪ್ಲಾನಿಂಗ್ ಮಾಡಿ ಮೂರು ವರ್ಷಕ್ಕೆ ಮೂರು ಜನ ಮುಖ್ಯ ಮಂತ್ರಿಗಳು ಆದರು. ಶಿಕ್ಷಕರ ಹೊಟ್ಟೆ ಮೇಲೆ ಏತಕ್ಕೆ ಹೊಡೆಯುತ್ತೀರಿ? ಶಿಕ್ಷಕರಿಗೆ ಎಲ್ಲಾ ಅರ್ಹತೆಗಳು ಇವೆ, ವಿದ್ಯೆ ಇದೆ.....

ಶ್ರೀ ಬಿ.ಹೆಚ್. ಬನ್ನಿಕೋಡ್:- ಮೂರು ಜನ ಅಲ್ಲ, ಈಗ ಆಗಲೇದಕ್ಕೆ ತಯಾರಿ ನಡೆದಿದೆ. ಮೂರಕ್ಕೆ ಮುಗಿಸಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಫ್ಯಾಮಿಲಿ ಪ್ಲಾನಿಂಗ್ ಮಾಡಿ ಎಂದರೆ ಆಗಲೇ ಪ್ರಶ್ನೆ ಬರುವುದಿಲ್ಲವಲ್ಲ. ಫ್ಯಾಮಿಲಿ ಪ್ಲಾನಿಂಗ್ ಮಾಡಬೇಕೆಂದು ಅಪೇಕ್ಷೆ ಇದ್ದರೆ ಮುಖ್ಯ ಮಂತ್ರಿಗಳ ಸ್ಥಾನಕ್ಕೆ ಮೊದಲು ಮಾಡಿ. ವರ್ಷಕ್ಕೆ ಒಬ್ಬೊಬ್ಬರು ಮುಖ್ಯಮಂತ್ರಿ ಆಗುವುದನ್ನು ನಿಲ್ಲಿಸಿ. ಅರೆಕಾಲಿಕ ಶಿಕ್ಷಕರು ಹೊಟ್ಟೆ ಹಸಿದುಕೊಂಡು ನಿಮ್ಮ ಹತ್ತಿರ ಬಂದು ಭಿಕ್ಷೆ ಕೇಳುತ್ತಿದ್ದಾರೆ. ಹಗಲು ರಾತ್ರಿ ಪೂರ್ಣಾವಧಿ ಕೆಲಸ ಮಾಡುತ್ತಿದ್ದಾರೆ. ಅವರ ಉದ್ಯೋಗದಲ್ಲಿ, ಪ್ರಾಮಾಣಿಕತೆಯಲ್ಲಿ, ಕಾರ್ಯದಕ್ಷತೆಯಲ್ಲಿ ಏನೂ ಹಿಂದೆ ಬಿದ್ದಿಲ್ಲ. ಇಂಥ ಶಿಕ್ಷಕರು ನಿಮ್ಮ ಹತ್ತಿರ ಬಂದಿರಬೇಕಾದರೆ, ತಾವೇ ಅನೇಕ ವರ್ಷಗಳಿಂದ ಅವರಿಗೆ ಆಶ್ವಾಸನೆ ಕೊಟ್ಟಿರಬೇಕಾದರೆ ಇವತ್ತು ಈ ಉತ್ತರ ಎಲ್ಲ ಶಿಕ್ಷಕರಿಗೆ ಬರಸಿಡಿಲು ಬಡಿದಂತಾಗುತ್ತದೆ. ಖಂಡಿತ ಅವರು ಬದುಕುವುದಕ್ಕಾಗುವುದಿಲ್ಲ. ಅವರು ಹೇಗೆ ಜೀವನ ಮಾಡುವುದಕ್ಕಾಗುತ್ತದೆ? ಅನೇಕರು ೩೫-೪೦ ವರ್ಷ ವಯಸ್ಸು ದಾಟುತ್ತಿದ್ದಾರೆ. ಅವರಿಗೆ ಯಾವುದೇ ಇಂಟರ್‌ವ್ಯೂ ಬರುವುದಿಲ್ಲ. ಇಂಟರ್‌ವ್ಯೂ ಬರುವುದಿಲ್ಲವೆಂದರೆ ಕೂಲಿ ಕೆಲಸ ಮಾಡಬೇಕಾಗುತ್ತದೆ. ೧೫ ರೂಪಾಯಿ ಕೂಲಿಗೆ ಗದ್ದೆ ಕೆಲಸಕ್ಕೆ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಅವರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಹೇಗಾದರೂ ಮಾಡಿ ಆ ಶಿಕ್ಷಕರಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಕೂಡ ಈ ಸಮಾಜದಲ್ಲಿ ತಲೆಯೆತ್ತಿ ಜೀವನ ಮಾಡುವ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆ ಹಾಕಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರಿ):- ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒತ್ತಾಯಪಡಿಸುವುದು ಏನೆಂದರೆ, ಈ ಪ್ರೌಢ ಶಾಲೆಗಳಲ್ಲಿ ಪೂರ್ಣಕಾಲಿಕ ಹುದ್ದೆಗಳಲ್ಲಿ ಶಿಕ್ಷಕರು ೧೦-೧೫ ವರ್ಷಗಳಿಂದ ಕೆಲಸ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂಬುದು ಸರ್ಕಾರದ ಪಾಲಿಸಿ. ಇಡೀ ದೇಶದಲ್ಲಿ ಅದೇ ಉದ್ದೇಶ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅವರು ಆ ಹುದ್ದೆಗಳಲ್ಲಿ ಪೂರ್ಣಾವಧಿ ಕೆಲಸ ಮಾಡುತ್ತಿದ್ದಾರೋ ಇಲ್ಲವೋ? ೧೦-೧೫ ವರ್ಷಗಳಿಂದ ಜೀತದಾಳುಗಳಂತೆ ೧೦೦-೨೦೦-೩೦೦ ರೂಪಾಯಿಗಳಿಗೆ ದುಡಿಯುತ್ತಿರುವ ಸಂದರ್ಭದಲ್ಲಿ ಅವರಿಗೆ ೩೫-೪೦ ವರ್ಷ ವಯಸ್ಸಾಗಿದೆ. ನಿಯಮಾವಳಿಯನ್ನು ಪಕ್ಕಕ್ಕೆ ತಳ್ಳಿ ಅವರನ್ನು ನೇಮಿಸಿ ಎಂದೇನು ನಾವು ಒತ್ತಾಯ ಮಾಡಿರಲಿಲ್ಲ. ಇವತ್ತಿನ ದಿವಸ ಮುಖ್ಯ ಪಶು ಸಂಗೋಪನಾ ಸಚಿವರು ಹೇಳಿಕೆ

ಕೊಟ್ಟು ಅವರ ಇಲಾಖೆಯಲ್ಲಿ ಟೆಂಪೊರರಿಯಾಗಿ ಕೆಲವು ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ನಿಮ್ಮ ಸರ್ಕಾರಕ್ಕೆ ಆಗತ್ಯ ಇರುವ ಹುದ್ದೆಗಳನ್ನು ನೇಮಿಸಿ ಪೂರ್ಣ ಸಂಬಳ ಕೊಡುವ ಶಕ್ತಿ ಇಲ್ಲ. ಒಬ್ಬ ಅವೇ ಟೀಚರ್ ಎರಡು ಅಥವಾ ಎರಡೂವರೆ ಸಾವಿರ ರೂಪಾಯಿ ಸಂಬಳ ತೆಗೆದು ಕೊಳ್ಳುತ್ತಿರತಕ್ಕ ಜಾಗದಲ್ಲಿ ಕೇವಲ ೨೦೦-೩೦೦ ರೂಪಾಯಿಗೆ ಜೀತದಾಳಿನಂತೆ ಈ ರಾಜ್ಯದಲ್ಲಿ ಹತ್ತಾರು ವರ್ಷ ದುಡಿದು ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡುತ್ತಾ ಇರುವಾಗ ಬೇರೆ ರೂಪದಲ್ಲಿ ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ ಇದರಲ್ಲಿ ಅವಕಾಶವಾಗುವುದಿಲ್ಲ ಎನ್ನುವುದು ಅಕ್ಷಮ್ಯ ಅಪರಾಧವಾಗುತ್ತದೆ. ದಯಮಾಡಿ ಹಾಗೆ ಮಾಡಬೇಡಿ. ನಾವು ೪ ಜನ ಇದ್ದೇವೆ. ಬಹಳ ಜಾಸ್ತಿ ಎಂದರೂ ೫-೪ ಜನ ಸೇರಿದರೂ ಬಹುಮತ ನಿಮಗೆ ಇದೆ. ನೀವು ಹೇಳಿದ ಹೇಳಿಕೆಗೆ ನಾವು ತಲಬಾಗಬೇಕಾಗುತ್ತದೆ. ಇಲ್ಲವೇ ವಾಕೌಟ್ ಮಾಡಬೇಕಾಗುತ್ತದೆ. ಪ್ರತಿಭಟನೆ ಮಾಡಬೇಕಾಗುತ್ತದೆ. ಇದರಿಂದ ಪ್ರಯೋಜನ ಆಗುವುದಿಲ್ಲ. ಕೇವಲ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ ಶಿಕ್ಷಕರು ಎಂದಲ್ಲ, ಯಾರನ್ನು ಹಂಗಾಮಿಯಾಗಿ ಬೇರೆ ಬೇರೆ ರೂಪದಲ್ಲಿ ತಾವು ನೇಮಕ ಮಾಡಿದ್ದೀರೋ ಅವರನ್ನು ಒಂದು ಸಲ ಖಾಯಂ ಮಾಡಿ. **come out with policy.** ಇನ್ನು ಮುಂದೆ ಯಾವುದೇ ಹುದ್ದೆಗಳನ್ನು ಕಾನೂನು ಚೌಕಟ್ಟಿನಲ್ಲಿ ನೇಮಕಾತಿ ಮಾಡುತ್ತೇವೆ, ರೋಸ್ಟರ್ ಸಿಸ್ಟಮ್ ಫಾಲೋ ಮಾಡುತ್ತೇವೆ ಎಂದು ಹೇಳಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ ತಾವು ದಾರಿ ಬಿಟ್ಟು ಹೋಗಿ ಎಂದು ಹೇಳುತ್ತಿಲ್ಲ. ಯಾರನ್ನು ನಿಮ್ಮ ಅನಿವಾರ್ಯ ಕಾರಣಕ್ಕೋಸ್ಕರ ನೇಮಕ ಮಾಡಿಕೊಂಡಿದ್ದೀರಿ, ನ್ಯಾಯವಾಗಿ ಅತ ಬದುಕಿರುವವರೆಗೆ ಅವನಿಗೆ ನೀವು ಋಣಿಯಾಗಿರಬೇಕು. ಸನ್ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಕಳೆದ ೧೦ ವರ್ಷಗಳಿಂದ ೨ ಸಾವಿರ ರೂಪಾಯಿ ಸಂಬಳ ತೆಗೆಮಕೊಳ್ಳಬೇಕಾದ ಶಿಕ್ಷಕ ಕೇವಲ ೧೦೦-೨೦೦ ರೂಪಾಯಿ ಪಡೆದು ದುಡಿದಿದ್ದಾನೆ. ನಿಮಗೆ ಎಷ್ಟು ಕೋಟಿ ರೂಪಾಯಿಗಳನ್ನು ಉಳಿಸಿ, ಅರೆ ಬೆತ್ತಲೆ ಮಲಗಿದ್ದಾನೆ. ನಾವು ಈ ಕಡೆ ಕೇಳುತ್ತೇವೆ, ನೀವು ಉತ್ತರ ಕೊಡುತ್ತೀರಿ. ಇದು ಪರಿಪಾಠ ಅಲ್ಲ. ಅತ ಸತ್ಯಾಗ್ರಹ ಮಾಡಬೇಕಾಗಿಲ್ಲ. ಆಮರಣಾಂತ ಉಪವಾಸ ಮಾಡಬೇಕಾಗಿಲ್ಲ. ನೀವು ಕರೆಸಿ ಚರ್ಚೆ ಮಾಡಬೇಕಾಗುತ್ತದೆ, ಅತನಿಗೆ ಸಾಂತ್ವನ ಹೇಳಬೇಕಾಗುತ್ತದೆ. ಅವನ ನೆರವಿಗೆ ಸರ್ಕಾರ ಬರಬೇಕಾಗುತ್ತದೆ. ಈ ಶಿಕ್ಷಕನನ್ನು ಈ ರೀತಿ ಸರ್ಕಾರ ನಡೆಸಿಕೊಂಡರೆ ಅವನು ಎಲ್ಲಿ ಪ್ರಾಮಾಣಿಕ ಕೆಲಸವನ್ನು ಶಿಕ್ಷಣ ಕ್ಷೇತ್ರದಲ್ಲಿ ಮಾಡುವುದಕ್ಕಾಗುತ್ತದೆ? ಮುಂದೆ ಆ ಶಾಲೆಗಳ ಮಕ್ಕಳ ಭವಿಷ್ಯ ಏನಾಗಬಹುದು? ಇದು ಮಹಾಪರಾಧವಾಗುತ್ತದೆ. ದಯಮಾಡಿ ಬೇಕಾದರೆ ಉತ್ತರವನ್ನು ಇನ್ನೊಂದು ದಿವಸ ಕೊಡಿ. ಮುಖ್ಯಮಂತ್ರಿಗಳ ಜೊತೆ, ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆಮಾಡಿ. ದಯಮಾಡಿ ಅವರು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಹಿಂದೆ ಅನೇಕ ಬಾರಿ ಹೇಳಿದ್ದೀರಿ. ಬೇಕಾದರೆ ರೆಕಾರ್ಡ್ ನೋಡಿ. ನಾನು ವಿವರ ಒದಗಿಸುತ್ತೇನೆ. ಖಾಯಂ ಮಾಡುತ್ತೇವೆಂದು ಒಪ್ಪಿದ್ದೀರಿ. ಆದುದರಿಂದ ದಯಮಾಡಿ ಈಗ ಯಾವುದೇ ಅಡ್ಡಿಆತಂಕ ಮಾಡದೇ ಅವರನ್ನು ಖಾಯಂ ಮಾಡಬೇಕು. ಅವರಿಗೆ ತೊಂದರೆ ಆಗದಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯವನ್ನು ನಿಮ್ಮ ಮೇಲೆ ಮಾಡಬಹುದು. ಇದಕ್ಕಿಂತಲೂ ಹೆಚ್ಚು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಈ ಸ್ಟೇಟ್‌ಮೆಂಟನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಬೇಡ, ಕಾಂಗ್ರೆಸ್ ಪಕ್ಷದಿಂದಲೇ ಯಾರಾದರೂ ಪ್ರಶ್ನೆ ಕೇಳುವ ಹಾಗೆ ಮಾಡಿ. ಅದಕ್ಕೆ ಅನುಕೂಲಕರ ಉತ್ತರ ಕೊಟ್ಟು ಅದನ್ನು ಮಾಡಿಕೊಡಿ. ಬಿಜೆಪಿಯಿಂದ ಪ್ರಶ್ನೆ ಕೇಳಿ ಈ ರೀತಿ ಉತ್ತರ ಕೊಟ್ಟು ಅವರನ್ನು ತಬ್ಬಲಿ ಮಾಡುವುದು ಬೇಡ. ಮಾನ್ಯ ಉಪಮುಖ್ಯಮಂತ್ರಿಗಳು ಇದನ್ನು ಯೋಚನೆ ಮಾಡಿ ಈ ಉತ್ತರವನ್ನು ವಾಪಸ್ಸು ಪಡೆದು, ಆಮರಣಾಂತ ಉಪವಾಸ ಕುಳಿತಿರುವವರಿಗೆ ಹೋಗಿ ಸಾಂತ್ವನ ಹೇಳಿ ಅಲ್ಲೇ ಅವರಿಗೆ ಒಂದು ಪರಿಹಾರ

ಕೊಟ್ಟು ಬನ್ನಿ. ನಮಗೆ ಹೆಸರು ಬೇಡ. ಅವರಿಗೆ ನ್ಯಾಯ ಸಿಗಬೇಕು. ಈ ಸಂದರ್ಭದಲ್ಲಿ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಡಿ. ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ, ಯಾವುದಾದರೂ ಇಂತಹ ನೇಮಕಾತಿಗಳನ್ನು ಒಂದು ಕಾನೂನು ಚೌಕಟ್ಟಿನಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಕಾನೂನು ಚೌಕಟ್ಟು ಬಿಟ್ಟು ಹೊರಗೆ ಹೋಗುವುದಕ್ಕಾಗುವುದಿಲ್ಲ. ಒಂದು ವೇಳೆ ಕಾನೂನು ಚೌಕಟ್ಟು ಬಿಟ್ಟು ಹೊರಗೆ ಹೋದರೆ ಇದೇ ಸದನದಲ್ಲಿ ಮತ್ತೆ ಇದೇ ರೀತಿ ಪ್ರಶ್ನೆಗಳು ಬರುತ್ತವೆ. ಕಾನೂನು ಬಿಟ್ಟು ಮಾಡಿದ್ದೀರಿ, ನಿಯಮ ಬಿಟ್ಟು ಮಾಡಿದ್ದೀರಿ ಹಾಗೆ ಹೀಗೆ ಎಂದು ಹೇಳುತ್ತಾರೆ. ಯಾವ ರೀತಿಯಲ್ಲಿ ಪ್ರೌಢ ಶಾಲಾ ಅಧ್ಯಾಪಕರನ್ನು ನೇಮಿಸಬೇಕೆಂದು ತನ್ನದೇ ಆದ ನಿಯಮ ಇದೆ. ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ. ಪ್ರೌಢ ಶಾಲಾ ಅಧ್ಯಾಪಕರನ್ನು ಜಿಲ್ಲಾಪರಿಷತ್ತಿನವರು ಮತ್ತು ಬೇರೆ ಬೇರೆ ರೀತಿಯಲ್ಲಿ ನೇಮಕ ಮಾಡಿಕೊಂಡಿದ್ದಾರೆ. ಬೇರೆ ಬೇರೆ ಅವಧಿಯಲ್ಲೂ ಕೂಡಾ ಅವರು ಇದ್ದಾರೆ. ಇಂತಹದ್ದರಲ್ಲಿ ಅವರನ್ನು ತೆಗೆಯುವ ಪ್ರಸಂಗ ಬಂದಾಗ ಅವರು ಸುಪ್ರೀಮ್ ಕೋರ್ಟ್‌ಗೆ ಹೋದರು. ಸುಪ್ರೀಮ್ ಕೋರ್ಟ್‌ನಲ್ಲೂ ಕೂಡ ಒಂದು ಡೈರೆಕ್ಷನ್ ಕೊಟ್ಟಿದ್ದಾರೆ. ಅಡ್‌ಹಾಕ್ ಆಗಿ ಯಾರನ್ನು ನೇಮಕ ಮಾಡಲಾಗಿದೆ ಅವರನ್ನು ಕೆಲವು ಕಂಡೀಷನ್ ಹಾಕಿ ಅಲ್ಲೇ ಉಳಿಸಿಕೊಳ್ಳುವ ಬಗ್ಗೆ ಹೇಳಿದ್ದಾರೆ. ಜೊತೆಗೆ ನಾಳೆ ಅವರನ್ನು ರೆಗ್ಯುಲರ್ ಆಗಿ ಅಪಾಯಿಂಟ್ ಮಾಡಬೇಕಾದರೆ ಅವರಿಗೆ ವಯಸ್ಸಿನ ನಿಬಂಧನೆ ಇರಬಾರದೆನ್ನುವ ಕಂಡೀಷನ್ ಹಾಕಿದ್ದಾರೆ. ೨ನೇ ಕಂಡೀಷನ್ ವೈಟೇಜ್ ಕೊಡುವುದು. ಅವರು ಎಷ್ಟು ವರ್ಷ ಸೇವೆ ಮಾಡಿದ್ದಾರೋ ಆ ಸೇವೆಗೆ ವರ್ಷಕ್ಕೆ ೦.೫೦ ಪರ್ಸೆಂಟ್‌ನಂತೆ, ಎಂದರೆ ಅರ್ಧ ಮಾರ್ಕ್ಸ್ ಪ್ರತಿ ವರ್ಷಕ್ಕೆ ಕೊಡಿಸಿ ಪರ್ಸೆಂಟೇಜ್ ಲೆಕ್ಕ ಮಾಡಿ ನೇಮಿಸಿಕೊಳ್ಳುವುದು. ಮತ್ತು ಒಂದು ವೇಳೆ ಯಾವುದಾದರೂ ಒಂದು ಜಿಲ್ಲೆ ಅಥವಾ ಡಿವಿಜನ್‌ನಲ್ಲಿ ರೆಗ್ಯುಲರಾಗಿ ಪ್ರೌಢಶಾಲಾ ಅಧ್ಯಾಪಕರ ನೇಮಕಾತಿ ಆಗಿತ್ತು ಎಂದರೆ ಮುಂದೆ ಖಾಲಿ ಜಾಗಗಳು ಏನು ಬೀಳುತ್ತವೆ ಅವುಗಳಲ್ಲಿ ತೆಗೆದುಕೊಳ್ಳಬೇಕಾದರೆ ಇವರನ್ನು ಕನ್ಸಿಡರ್ ಮಾಡಬೇಕೆಂದು, ಇದೇ ಮೂರು ಕಂಡೀಷನ್ಸ್ ಅವರು ಹಾಕಿದ್ದಾರೆ. ಸುಪ್ರೀಮ್ ಕೋರ್ಟ್‌ನವರು ಈ ಕಂಡೀಷನ್ಸ್ ಹಾಕಿದ್ದಾರೆ. ಈಗ ಸುಪ್ರೀಂ ಕೋರ್ಟ್‌ನವರು ಇಂತಹ ಕಂಡೀಷನ್ಸ್ ಹಾಕಿದ್ದಾರೆ. ನಮ್ಮದೇ ಆದಂತಹ ಕೆಲವು ನಿಯಮಾವಳಿಗಳಿವೆ. ಕಾನೂನು ಚೌಕಟ್ಟು ಇದೆ. ನಾವು ನಾಳೆ ಕರೆಯುತ್ತಿದ್ದೇವೆ ಮತ್ತು ಕೆಲವು ರಿಕ್ರೂಟ್‌ಮೆಂಟ್ ಆಗುತ್ತಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ಒಂದೇ ಒಂದು ನೇರವಾಗಿ ಉತ್ತರಕೊಡಿ. ಯಾವ ಕಾರಣಕ್ಕೂ ಈ ಉಪನಾಸ್ಯಕರಿಗೆ ತೊಂದರೆಯಾಗುವುದಿಲ್ಲ, ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಆಕಾಮಡೇಟ್ ಮಾಡುತ್ತೇವೆ, ಅವರನ್ನು ಬೀದಿ ಪಾಲಾಗುವುದಕ್ಕೆ ಬಿಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಕೊಡಿ. ಅವರನ್ನು ಕರೆಯಿಸಿ ಮಾತನಾಡಿ. ನಾನು ಸುತ್ತಿಬಳಸಿ ಮಾತನಾಡುವುದಿಲ್ಲ. ಯಾರು ಇವತ್ತು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಯಾರು ಜವಾಬ್ದಾರರು ಸ್ವಾಮಿ? ಇವರು ಸುಮಾರು ೧೦-೧೫ ವರ್ಷಗಳಿಂದ ಕೇವಲ ೧೦೦-೨೦೦ ರೂಪಾಯಿಗಳಿಗೆ ದುಡಿಯುತ್ತಿದ್ದಾರೆ. ಆದರೆ ಅದೇ ಕ್ಷೇತ್ರದಲ್ಲಿರುವವರು ಒಂದು ತಿಂಗಳಿಗೆ ಹೆಚ್ಚುವರಿ ತುಟ್ಟಿಭತ್ಯ ಸೇರಿ ೨೫೭೪ ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಇವರು ೩೦೦-೪೦೦ ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ೧೦-೧೫ ವರ್ಷಗಳಿಂದ ದುಡಿದಿದ್ದಾರೆ. ಇಷ್ಟು ಕಡಿಮೆ ಸಂಬಳಕ್ಕೆ ದುಡಿದು ಎಷ್ಟು ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಉಳಿಸಿರಬಹುದು. ಅವನು ಕೆಲಸ ಮಾಡಿದ್ದಾನೋ ಇಲ್ಲವೊ, ಅವನಿಗೆ ಬೇರೇನೂ ಯೋಗ್ಯತೆ ಇಲ್ಲದಿರಬಹುದು. ೧೦-೧೫ ವರ್ಷಗಳ ಕಾಲ ಶಿಕ್ಷಕನಾಗಿ ಪರಿಣತಿ ಹೊಂದಿದ್ದಾನೊ, ಇಲ್ಲವೊ? ೪೦-೫೦ ವರ್ಷ ವಯಸ್ಸಾದ ಮೇಲೆ ಅವರ ಜೀವನದ ಮುಂದಿನ ಭವಿಷ್ಯವೇನು? ಮದುವೆಯಾಗಿರುವವರ ಹೆಂಡತಿ ಮಕ್ಕಳ ಗತಿಯೇನು? ಈರೀತಿ ಯುವಕರು ವಿಶೇಷವಾಗಿ

ಶಿಕ್ಷಣಕ್ಷೇತ್ರದಲ್ಲಿರುವವರನ್ನು ನೀವು ಶಿಕ್ಷಿಸುವುದು, ಅವರನ್ನು ಕಾನೂನಿನ ಕತ್ತರಿಯಲ್ಲಿ ಸಿಕ್ಕಿಸಿ ಕೊಲ್ಲುವುದು ಸರಿಯಲ್ಲ. ಆದುದರಿಂದ ನಾನು ವಿನಂತಿ ಮಾಡುತ್ತೇನೆ ಅವರಿಗೆ ಯಾರಿಗೂ ತೊಂದರೆಯಾಗದಂತೆ ನಿಯಮಗಳನ್ನು ಬದಲಾವಣೆ ಮಾಡಿಕೊಂಡು ಇದರ ಬಗ್ಗೆ ಚರ್ಚೆಮಾಡಿ ಒಂದು ಪರಿಹಾರ ಒದಗಿಸಿಕೊಡುತ್ತೇವೆಂದು ಹೇಳಿ. ಅವರು ೨೨ನೇ ತಾರೀಖಿನಿಂದ ಉರುಳು ಸೇವೆಯನ್ನು ಏತಕ್ಕೆ ಮಾಡಬೇಕು ಸ್ವಾಮಿ? ನಾವು ನೀವು ಅಲ್ಲಿ ಹೋಗಬೇಕಾಗುತ್ತದೆ, ಅಲ್ಲಿ ಅನಾಹುತಗಳು ಆಗುತ್ತವೆ. ಅನಿವಾರ್ಯವಾಗಿ ಈ ಸದನ ಸೇರಿದಾಗ, ಅನೇಕ ಸಮಸ್ಯೆಗಳು ಇರುವಂಥ ಶಿಕ್ಷಕರು, ಸ್ಟೆಫಂಡರಿ ಗ್ರಾಜುಯೇಟ್ಸ್ ಮತ್ತು ಬೇರೆ ಬೇರೆ ಜನ ಇಲ್ಲಿ ಬಂದು ಸತ್ಯಾಗ್ರಹ ಚಳುವಳಿ ರೈಸ್ ಮಾಡುವುದು ಇದೇ ಆಗಿದೆ. ಇದು ಸರಿಯಲ್ಲ. ಇದೆಲ್ಲಕ್ಕೂ ಪರಿಹಾರ ಹುಡುಕುವುದು ಸರ್ಕಾರದ ಜವಾಬ್ದಾರಿ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಈ ಉತ್ತರವನ್ನು ನೀವು ವಾಪಸ್ಸು ತೆಗೆದುಕೊಳ್ಳಿ ಒಬ್ಬರಿಗೂ ತೊಂದರೆಯಾಗುವುದಿಲ್ಲ, ಅವರಿಗೆ ಬೇಕಾದಂಥ ಅನುಕೂಲಗಳನ್ನು ನಾವು ಮಾಡಿಕೊಡುತ್ತೇವೆ, ಅವರು ಉರುಳುಸೇವೆ ಮಾಡುವುದು ಬೇಡ. ನಾವು ಅವರನ್ನು ಕರೆಯಿಸಿ ಮಾತನಾಡುತ್ತೇವೆನ್ನುವ ಭರವಸೆಯನ್ನು ದಯಮಾಡಿ ಕೊಡಿ.

ಡಾ. ಹೆಚ್.ಡಿ. ಲಮಾಣಿ:- ಯಾರೇ ಆದರೂ ನಿಯಮಗಳ ಪ್ರಕಾರ ಹೋಗಬೇಕಾಗುತ್ತದೆ. ಅಧ್ಯಾಪಕರ ಬಗ್ಗೆ ನನಗೆ ಸಹಾನುಭೂತಿ ಇದೆ. ಏಕೆಂದರೆ ನಾನು ಆ ಸ್ಟೇಜನ್ನು ದಾಟಿ ಬಂದಿದ್ದೇನೆ. ನಾನು ಸಹ ಲೋಕಲ್ ಕ್ಯಾಂಡಿಡೇಟ್ ಇದ್ದ ನಾನು ಸಹಿತ ರಿಕ್ರೂಟ್‌ಮೆಂಟ್ ಕಮಿಟಿಯ ಮುಂದೆ ಹೋಗಿ ಅಪಾಯಿಂಟ್‌ಮೆಂಟ್ ಆಗಿದ್ದೇನೆ. ನಿಯಮಗಳು ನನಗೂ ಗೊತ್ತಿದೆ. ಯಾವುದಾದರೂ ಹಾಗೆಯೇ ಆಡ್‌ಹಾಕ್ ಆಗಿ ಎಲ್ಲರನ್ನೂ ಈ ರೀತಿಯಲ್ಲಿ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಕೆಲವೊಂದು ವೇಟೇಜಸ್ ಕೊಡುತ್ತೇವೆ. ಅವರಿಗೆ ಏಜ್ ಏನಿದೆ, ಅದು ಸಂಪೂರ್ಣವಾಗಿ ರಿಲ್ಯಾಕ್ಸ್ ಇದೆ. ನಾಳೆ ಅವರಿಗೆ ೫೫ ವರ್ಷ ಆದರೂ ಸಹಿತ ಇಂಟರ್ವ್ಯೂಗೆ ಬರಲಿಕ್ಕೆ ಸಾಧ್ಯವಿದೆ. ಅಂತೂ ಅವರಿಗೆ ಯಾವುದಾದರೂ ಒಂದು ರೀತಿಯಲ್ಲಿ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ನಾವು ಚರ್ಚೆ ಮಾಡುತ್ತೇವೆ. ಪರಿಶೀಲಿಸುತ್ತೇವೆ. ನಮ್ಮ ಅಧಿಕಾರಿಗಳನ್ನೆ ಕರೆಸಿ ವಿಚಾರಮಾಡಿ ನಿಯಮಗಳಲ್ಲಿ ಏನಾದ್ರು ಪರಿಸ್ಥಿತಿ ಇದ್ದರೆ ನೋಡಿ ಎಂದು ಹೇಳುತ್ತೇವೆ. ಏಕೆಂದರೆ, ನಾವು ಅಲ್ಲಿ ರೋಸ್ಟರ್ ಸಿಸ್ಟಮ್ ನೋಡಬೇಕಾಗುತ್ತದೆ ರಿಕ್ರೂಟ್‌ಮೆಂಟ್ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇವುಗಳನ್ನೆಲ್ಲ ನೋಡಿ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಮಾಡಿ. ಇದನ್ನು ಸಮಗ್ರವಾಗಿ ಪರಿಶೀಲಿಸಿ ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವಿತ್ತೆಂದರೆ ಖಂಡಿತ ಮಾಡುತ್ತೇನೆ. ನಾಳೆ ಇದನ್ನೇ ಆಶ್ವಾಸನೆ ಎಂದು ಹೇಳುತ್ತೀರಿ. ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವಿತ್ತೆಂದರೆ ಅವಶ್ಯವಾಗಿ ನಾನು ಮಾಡಿ ಕೊಡುತ್ತೇನೆಂದು ಮಾತ್ರ ಹೇಳಬಲ್ಲೆ. ಆದರೆ ಸಾರಸಗಟಾಗಿ ಎಲ್ಲರನ್ನೂ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕೆಂದು ಹೇಳಿದರೆ ಅದು ಆಗಲಾರದ ಮಾತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಯಮಗಳಿಗೆ ಬೇಕಾದ ತಿದ್ದುಪಡಿಯನ್ನು ತಂದು ಮುಖ್ಯ ಮಂತ್ರಿಗಳ ಜೊತೆಗೆ, ಹಿರಿಯರ ಜೊತೆಗೆ ಚರ್ಚೆಮಾಡಿ ಅವರಿಗೆ ಅನುಕೂಲ ಮಾಡಿ ತಾವು ಹಿಂದುಳಿದ ಸಮಾಜದಿಂದ ಬಂದವರಾಗಿದ್ದೀರಿ. ತಮಗೆ ಕಷ್ಟ ಗೊತ್ತಿದೆ. ಶಿಕ್ಷಕನಾಗಿದ್ದೆ ಎಂದು ಹೇಳುತ್ತೀರಿ. ಅಂತಹವರಿಗೆ ಈ ಸ್ಥಾನ ಸಿಕ್ಕಿದ್ದು ಒಳ್ಳೆಯದಾಗಿದೆ. ನಿಮ್ಮ ಕಾಲದಲ್ಲಾದರೂ ಅವರಿಗೆ ನ್ಯಾಯ ಸಿಗದಿದ್ದರೆ ಅಕ್ಷಮ್ಯ ಅಪರಾಧವಾಗುತ್ತದೆ. ಆ ಪಾಪದ ಹೊರೆಯನ್ನು ನೀವು ಹೊರಬೇಕಾಗುತ್ತದೆ. ಇದನ್ನು ಅರ್ಥಮಾಡಿಕೊಂಡು ಅವರಿಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲವೆನ್ನುವ ಒಂದು ಮಾತನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ ಹೆಚ್.ಡಿ. ಲಮಾಣಿ:- ಇದರ ಬಗ್ಗೆ ಚರ್ಚೆಮಾಡಿ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತೇನೆ. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಕಾನೂನು ಚೌಕಟ್ಟಿಗೆ ಬೆಂಕಿ ಹಚ್ಚುತ್ತಾ ಇದ್ದೀರಿ. ಅದರ ಕಲ್ಪನೆ ನಿಮಗೆ ಇಲ್ಲ. ಇನ್ನಾದರೂ ಕಾನೂನಿಗೆ ಗೌರವ ಕೊಡುವುದನ್ನು ಕಲಿಯಿರಿ ಎಂದು ಅವರಿಗೆ ಹೇಳಿದ್ದುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಕಾನೂನಿಗೆ ತಿದ್ದುಪಡಿಯನ್ನು ತನ್ನಿ, ಅಶ್ವಾಸನೆ ಬಿಡಿ. ಅವರಿಗೆ ಅನ್ನೆ ಕೊಡಿ. ನಾನು ಇಷ್ಟೇ ಕೇಳುವುದು, ಇನ್ನೇನೂ ಕೇಳುವುದಿಲ್ಲ.

ವಿಷಯ: ಸರ್ಕಾರದ ಇತ್ತೀಚಿನ ಕಾರ್ಯನೀತಿಯಿಂದಾಗಿ ಗೃಹ ನಿರ್ಮಾಣ ಸಹಕಾರ ಸಂಘಗಳ ನಿವೇಶನರಹಿತ ಸಾವಿರಾರು ಸದಸ್ಯರುಗಳಿಗೆ ತೊಂದರೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಸರ್ಕಾರದ ನೀತಿಯಿಂದಾಗಿ ಬೆಂಗಳೂರಿನ ನಾಗರೀಕರಿಗೆ ನಿವೇಶನಗಳನ್ನು ಕೊಡತಕ್ಕದ್ದಕ್ಕೆ ತೊಂದರೆಯಾಗಿದ್ದು, ಸಹಕಾರ ಸಂಘಗಳ ಪತಿಯಿಂದ ಮಾಡತಕ್ಕದ್ದನ್ನು ಬಿ.ಡಿ.ಎ. ಮೂಲಕ ಹಂಚಿಕೆ ಮಾಡಬೇಕೆಂದು ರಾಜ್ಯಸರ್ಕಾರ ತೀರ್ಮಾನಿಸಿರುವುದರಿಂದ ಆಗಿರತಕ್ಕಂಥ ತೊಂದರೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

* ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಉತ್ತರವನ್ನು ಕೊಡಲು ಬಯಸುತ್ತೇನೆ.

ನೈಜ ಸದಸ್ಯರಿಗೆ ನಿವೇಶನಗಳನ್ನು ಒದಗಿಸುವುದು ಸಹಕಾರ ಸಂಘಗಳ ಉದ್ದೇಶವಾಗಿದ್ದರೂ ದುರದೃಷ್ಟವಶಾತ್ ಕೆಲವು ಸಂಘಗಳು ಕೆಲಸ ಮಾಡಿರುವ ರೀತಿಯಿಂದಾಗಿ ನಿವೇಶನದ ನೈಜ ಅಗತ್ಯವಿರುವವರಿಗೆ ಹೆಚ್ಚಿನ ತೊಂದರೆಯುಂಟಾಗಿ ನೀತಿಬಾಹಿರಶಕ್ತಿಗಳಿಗೆ ಉತ್ತೇಜನ ದೊರಕುತ್ತಿದ್ದುದರಿಂದ ಸಹಕಾರ ಸಂಘಗಳಲ್ಲಿನ ನೈಜ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುವ ಏಕ ಮಾತ್ರ ಉದ್ದೇಶದಿಂದ ಸರ್ಕಾರವು ದಿನಾಂಕ ೮-೧೧-೭೬ರಂದು ಎರಡೂ ಸದನಗಳಲ್ಲಿ ಬೆಂಗಳೂರು ನಗರದಲ್ಲಿನ ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆಗಳ ಬಗ್ಗೆ ಹೇಳಿಕೆ ನೀಡಿತ್ತು.

ಅದರಂತೆ ಗೃಹ ನಿರ್ಮಾಣ ಸಹಕಾರ ಸಂಘಗಳ ಪರವಾಗಿ ಸ್ವಾಧೀನ ಪಡಿಸಿಕೊಂಡಿದ್ದ ಹಾಗೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದ ಎಲ್ಲ ಜಮೀನುಗಳನ್ನು ನೈಜ ಸದಸ್ಯರ ಹಿತದೃಷ್ಟಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟು ಅದರ ಮೂಲಕ ಉನ್ನತ ಮಟ್ಟದ ಸಮಿತಿಯು ಗುರುತಿಸುವ ನೈಜ ಸದಸ್ಯರಿಗೆ ನಿವೇಶನಗಳನ್ನು ಹಂಚಲು ಉದ್ದೇಶಿಲಾಗಿದೆ. ನೈಜ ಸದಸ್ಯರಿಗೆ ಸಲ್ಲಬೇಕಾದ ನಿವೇಶನಗಳು ಇತರರ ವಶವಾಗುವುದನ್ನು ತಡೆಯುವ ಸದುದ್ದೇಶದಿಂದ ಸಂಘಗಳಿಗೆ ಈಗಾಗಲೇ ನೀಡಿರುವ ಜಮೀನುಗಳನ್ನು ಸಹ ವಾಪಸ್ಸು ಸರ್ಕಾರದ ವಶಕ್ಕೆ ಪಡೆಯುವುದು ಅನಿವಾರ್ಯವಾಗಿರುತ್ತದೆ. ಇದರಿಂದ ನಿವೇಶನ ರಹಿತ ಸದಸ್ಯರಿಗೆ ಅನಾನುಕೂಲವಾಗಲಿ, ತೊಂದರೆಯಾಗಲಿ ಉಂಟಾಗುವುದೆಂಬ ಯಾವುದೇ ಶಂಕೆ ಪಡುವುದು ಬೇಡ, ನೈಜ ಸದಸ್ಯರಿಗೆ ವಂಚನೆಯಾಗಿ ನೀತಿಬಾಹಿರ ಶಕ್ತಿಗಳು ನಿವೇಶನಗಳನ್ನು ದೊರಕಿಸಿಕೊಂಡು ಹೋಗುವುದನ್ನು ತಡೆದು ಪಟ್ಟಭದ್ರಹಿತಾಸಕ್ತಿಗಳಿಂದ ಸಾಮಾನ್ಯ ಹಾಗೂ ಬಡಜನಗಳ ಶೋಷಣೆಯನ್ನು ಕೊನೆಗೊಳಿಸಲು ಸರ್ಕಾರವು ಈ ತೀರ್ಮಾನ ಕೈಗೊಂಡಿದ್ದು ಇದನ್ನು ಪುನರ್ಪರಿಶೀಲಿಸುವ ಅವಶ್ಯಕತೆ ಕಂಡುಬರುವುದಿಲ್ಲ.